ಕಮಲಾಪುರ ಮತ ಕ್ಷೇತ್ರದಲ್ಲಿರುವ ಕೆರೆಗಳು.

೧೩೪೧. ಶ್ರೀ ಜಿ. ರಾಮಕೃಷ್ಣ (ಕಮಲಾಪುರ).—ಈ ಕೆಳಕಂಡಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಕಮಲಾಪುರ ಮತ ಕ್ಷೇತ್ರದಲ್ಲಿ ಎಷ್ಟು ಕೆರೆಗಳನ್ನು ಕಟ್ಟಲಾಗಿದೆ, ಹಾಗೂ ಅವುಗಳಿಗೆ ತಗುಲಿದ ವೆಚ್ಚ ಎಷ್ಟು ?

ಆ) ಒಂದೊಂದು ಕೆರೆಗಳಿಂದ ಎಷ್ಟು ಎಕರೆ ಭೂಮಿಗೆ ನೀರಾವರಿಯಾಗಬೇಕಾಗಿತ್ತು ? ಈಗ ಪ್ರತಿಯೊಂದು ಕೆರೆಯಿಂದ ಎಷ್ಟು ಎಕರೆ ನೀರಾವರಿಯಾಗುತ್ತಿದೆ ಮತ್ತು ಕಡಿಮೆ ನೀರಾವರಿಯಾಗಲು ಕಾರಣಗಳೇನು ?

ಇ) ಕೆರೆಗಳು ಸರಿಯಾಗಿ ನಿರ್ಮಾಣ ಮಾಡದೇ ಇದ್ದ ಅಧಿಕಾರಿಗಳ ಮೇಲೆ ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಂಡಿರುವರೇ ಅಥವಾ ತೆಗೆದುಕೊಳ್ಳುವರೇ ?

ಈ) ಈ ಕೆರೆಗಳ ದುರಸ್ತಿಗಾಗಿ ಸರ್ಕಾರದವರು ಯಾವ ಕಾರ್ಯಕ್ರಮ ಹಾಕಿಕೊಂಡಿರುವರು ಮತ್ತು ಇವುಗಳನ್ನು ದುರಸ್ತಿ ಮಾಡಿ ರೈತರಿಗೆ ಯಾವಾಗ ನೀರು ಪೂರೈಸಲಾಗುವುದು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೯ ಕೆರೆಗಳು, ವೆಚ್ಚ ೮೪.೭೬ ಲಕ್ಷ ರೂ.ಗಳು.

ಆ) ಲಗತ್ತಿಸಲಾದ ಪಟ್ಟಿಯಲ್ಲಿ ವಿವರಗಳನ್ನು ಕೊಡಲಾಗಿದೆ.

ಇ) ಕೆಲಸಗಳನ್ನು ಮಂಜೂರಾದ ಅಂದಾಜುಗಳಂತೆ ಕಾರ್ಯಗತ ಮಾಡಲಾಗುತ್ತಿದೆಯಾದ್ದರಿಂದ, ಸಂಭಂದಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಈ ಕೆರೆಗಳ ದುರಸ್ತಿ ಕೆಲಸ ಮಾಡಬೇಕಾಗಿಲ್ಲ. ಒಂದು ಕೆರೆಯ ಕಾಲುವೆ ಮಾತ್ರ ಸ್ವಲ್ಪ ಪೂರ್ಣವಾಗಬೇಕಾಗಿದೆ. ಇದನ್ನು ಸಧ್ಯದಲ್ಲೇ ಪೂರ್ಣಗೊಳಿಸಲಾಗುವುದು. ರಿಪೇರಿಗಳೇನಾದರೂ ಬೇಕಾದಲ್ಲಿ ಅದನ್ನು ಸಹಾ ಈ ವರ್ಷದಲ್ಲೇ ಮಾಡಿ ಮುಗಿಸಲಾಗುವುದು.

STATEMENT SHOWING THE AYACUT AND EXPENDITURE
ASSEMBLY

Name of Taluka		Name of Tank	Estimated cost Rs. in lakhs	Ayacut proposed Ha.
1		2	3	4
Aland Taluka	1	Salegaon tank	14.25	458
	2	Matki tank	6.91	193
Gulbarga Taluk	3	Malsapur tank	8.34	273
	4	Bhimanhal tank	4.80	101.20
	5	Neelkod tank	1.98	248.00
	6	Okali tank	4.59	97.6
	7	Kolkunda tank	2.50	44.80
	8	Kamalapur tank	2.78	148.00
	9	Dasarath tank	1.73	71.00

IN RESPECT OF TANKS COMING UNDER KAMALAPUR CONSTOTUENCY.

Ayacut Developed in Ha.	Expenditure upto date in lakhs.	Remarks
5	6	7
110	9.38	The canal work was in progress during 84-85 so the water was not made available fully. Further lands are also not developed.
159	12.98	Canals completed but some lands are to be developed. Further the tanks has not received water fully.
60.00	30.77	Canals completed except some chains in Tail end. Due to insufficient rainfall the ayacut could not be developed fully.
55.00	8.07	Canals completed. Due to insufficient rainfal, the ayacut could not be developed.
60.00	3.50	Canal completed. The land holders are being persuaded to develop their lands by levelling etc.
27.90	5.08	-do-
5.00	6.54	-do-
40.00	6.33	Canal works completed. The ayacut could not be developed due to insufficient rainfall.
70.00	2.11	Ayacut fully developed.
Total	84.76	

ಶ್ರೀ ಜಿ. ರಾಮಕೃಷ್ಣ.—ಸ್ವಾಮಿ, ನನ್ನ ಕ್ಷೇತ್ರದಲ್ಲಿ ೮೪ ಲಕ್ಷ ರೂಪಾಯಿ ಖರ್ಚು ಮಾಡಿ ೯ ಕೆರೆಗಳನ್ನು ಕಟ್ಟಿದ್ದಾರೆ. ಮೊದಲನೆಯದು ಆಳಂದ ತಾಲೂಕಿನಲ್ಲಿ ೪೫೮ ಹೆಕ್ಟೇರ್ ಪ್ರದೇಶಕ್ಕೆ ನೀರನ್ನು ಕೊಡುತ್ತೇವೆಂದು ಹೇಳಿ ಕೇವಲ ೧೧೦ ಹೆಕ್ಟೇರ್‌ಗಳಿಗೆ ನೀರನ್ನು ಕೊಟ್ಟಿದ್ದೀರಿ. ಅದೇ ರೀತಿ ಗುಲ್ಬರ್ಗಾ ತಾಲ್ಲೂಕಿನಲ್ಲಿ ಮಲ್ಲಾಪುರ ಟ್ಯಾಂಕ್‌ನಿಂದ ೨೭೩ ಹೆಕ್ಟೇರ್ ಪ್ರದೇಶಕ್ಕೆ ನೀರನ್ನು ಕೊಡುತ್ತೇವೆಂದು ಹೇಳಿ ಕೇವಲ ೬೦ ಹೆಕ್ಟೇರ್‌ಗಳಿಗೆ ನೀರನ್ನು ಕೊಟ್ಟಿದ್ದೀರಿ ಅದೇರೀತಿ ಕೋಲ್ಲೂಡ ಟ್ಯಾಂಕ್‌ನಿಂದ ೪೪.೮೦ ಹೆಕ್ಟೇರ್‌ಗಳಿಗೆ ನೀರನ್ನು ಕೊಡುತ್ತೇವೆಂದು ಹೇಳಿ ಕೇವಲ ೫ ಹೆಕ್ಟೇರ್‌ಗಳಿಗೆ ನೀರನ್ನು ಕೊಟ್ಟಿದ್ದೀರಿ. ಕವಲಾಪುರ ಟ್ಯಾಂಕ್‌ನಿಂದ ೧೪೮ ಹೆಕ್ಟೇರ್‌ಗಳಿಗೆ ನೀರನ್ನು ಕೊಡುತ್ತೇವೆಂದು ಹೇಳಿ ೪೦ ಹೆಕ್ಟೇರ್‌ಗಳಿಗೆ ನೀರನ್ನು ಕೊಡುತ್ತಿದ್ದೀರಿ.ನಾನು ಸ್ವತಃ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಕೇವಲ ೩-೪ ಎಕರೆಗೂ ಕೂಡ ನೀರು ಹೋಗುತ್ತಿಲ್ಲ. ಆ ಕಾಲುವೆಯಲ್ಲೂ ಕೂಡ ನೀರು ಹೋಗುತ್ತಿಲ್ಲ. ತಮಗೆ ಅಧಿಕಾರಿಗಳು ಕೊಟ್ಟಿರತಕ್ಕ ಪಟ್ಟಿ ಸರಿಯಿಲ್ಲವೆಂದು ಹೇಳುತ್ತೇನೆ. ಆದ್ದರಿಂದ ಮಾನ್ಯ ಸಚಿವರಲ್ಲಿ ನನ್ನ ಒಂದು ಮನವಿ ಏನೆಂದರೆ ತಾವು ಗುಲ್ಬರ್ಗಾಕ್ಕೆ ಯಾವಾಗಾದರೂ ಭೇಟಿ ನೀಡಿದಾಗ ಈ ೯ ಕೆರೆಗಳ ಪೈಕಿ ಎಷ್ಟು ಸಾಧ್ಯವೋ ಅಷ್ಟು ಕೆರೆಗಳನ್ನಾ ತಾವೇ ಹೋಗಿ ನೋಡಿಕೊಂಡು ಬರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ — ನಾನು ಸ್ಥಳಕ್ಕೆ ಹೋಗಿ ಸ್ವತಃ ನೋಡಿಕೊಂಡು ಬಂದಿದ್ದೇನೆಂದು ಅವರು ತಮ್ಮ ಅನುಭವದಿಂದ ಹೇಳುತ್ತಿದ್ದಾರೆಂದು ನಾನು ನಂಬುತ್ತೇನೆ. ಆದರೆ ನನಗೆ ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ನಾನು ಹೇಳುತ್ತಿದ್ದೇನೆ. ಒಂದು ವೇಳೆ ಎಲ್ಲಾದರೂ ತೊಂದರೆಯಾಗಿದ್ದರೆ ಕಾರಣ ಏನು ಎಂಬುದನ್ನು ಪರಿಶೀಲಿಸುತ್ತೇವೆ. ಮಳೆ ಬರಡೆ ನೀರು ಇಲ್ಲದೆ ತೊಂದರೆಯಾಗಿದ್ದರೆ ಅದಕ್ಕೆ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ. ಒಂದು ವೇಳೆ ಟೆಕ್ನಿಕಲ್ ತೊಂದರೆಯಿಂದಾಗಿ, ಕಾಲುವೆ ಸರಿಯಿರದೆ ತೂಬು ಸರಿಯಿರದೆಯಾದರೂ ತೊಂದರೆಯಾಗಿದ್ದರೆ, ಇದಕ್ಕೆ ಸಂಬಂಧಪಟ್ಟ ಸೂಪರಿಂಟೆಂಡೆಂಟ್ ಇಂಜಿನಿಯರರ್‌ಗಳಿಗೆ ಕಳುಹಿಸಿಕೊಡುತ್ತೇನೆ. ಅವರು ಸ್ಯಾಕ್ಷ್ಯಡ್‌ನ್ನು ಕಳುಹಿಸಿಕೊಡುತ್ತಾರೆ. ಅವರು ಹೋಗುವಾಗ ನಿಮ್ಮನ್ನೂ ಕೂಡ ಕರೆದುಕೊಂಡು ಹೋಗುವಂತೆ ಹೇಳುತ್ತೇನೆ. ನೀವು ಹೋಗಿ ಎಲ್ಲಿ ಏನು ದೋಷವಿದೆ ಎಂಬುದನ್ನು ತಿಳಿಸಿ.

ಶ್ರೀ ಜಿ. ರಾಮಕೃಷ್ಣ.—ಸ್ಯಾಕ್ಷ್ಯಡ್‌ನ ಜೊತೆ ನನ್ನನ್ನೂ ಕಳುಹಿಸಿಕೊಡುವುದಾದರೆ ನಾನೂ ಹೋಗುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈಗ ಸ್ಯಾಕ್ಷ್ಯಡ್‌ನವರು ಬೇರೆ ಎಲ್ಲೋ ಹೋಗಿದ್ದಾರೆ ಅವರು ಬಂದಕೂಡಲೇ ನಿಮ್ಮನ್ನೂ ಕರೆದುಕೊಂಡು ಹೋಗುವಂತೆ ಅವರಿಗೆ ಪತ್ರವನ್ನು ಬರೆಯುತ್ತೇನೆ. ತಪ್ಪಿತಸ್ಥರು ಯಾರೇ ಇರಲಿ ಅವರ ವಿರುದ್ಧ ತೀವ್ರ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಬೆಂಗಳೂರು ಮತ್ತು ಮೈಸೂರು ನಡುವೆ ಇರುವ ಮಂಡ್ಯ ರಸ್ತೆಯನ್ನು ಮಂಡ್ಯ ನಗರದ ಬಳಿ ಡಬಲ್ ರಸ್ತೆ ಮಾಡುವ ವಿಚಾರ ಕುರಿತು.

೧೫೬೧. ಶ್ರೀ ಎಸ್. ಡಿ. ಜಯರಾಮ್ (ಮಂಡ್ಯ)—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮತ್ತು ಮೈಸೂರು ನಡುವೆ ಇರುವ ಮಂಡ್ಯ ರಸ್ತೆಯನ್ನು ಮಂಡ್ಯ ನಗರದ ಬಳಿ ಡಬಲ್ ರಸ್ತೆ ಮಾಡುವ ವಿಚಾರ ಯಾವ ಹಂತದಲ್ಲಿದೆ,

ಆ) ಅದರ ಅಂದಾಜು ವೆಚ್ಚವೆಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಸಚಿವರು.)

ಅ) ಬೆಂಗಳೂರು–ಮೈಸೂರು ಮಂಡ್ಯ ರಸ್ತೆಯಲ್ಲಿ ಮಂಡ್ಯ ನಗರದ ವ್ಯಾಪ್ತಿಯಲ್ಲಿ ಹಾಯ್ದು ಹೋಗುವ ೩.೨೭೫ ಕಿ. ಮೀ. ಉದ್ದದ ರಸ್ತೆ ಭಾಗವನ್ನು ೮.೨ ಮೀಟರ್‌ನಿಂದ ೧೧.೮೦ ಮೀಟರ್ ವರೆಗೆ ವಿಸ್ತರಿಸುವ ಪ್ರಸ್ತಾವನೆಗೆ ಮಂಜೂರಾತಿ ನೀಡಲಾಗಿದ್ದು, ಕೆಲಸವು ಪ್ರಗತಿಯಲ್ಲಿದೆ.